# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಎಸ್.ಸಿ. 106/2025

Pw-10

Cw-13

ಸಾಕ್ಷಿದಾರರ ಹೆಸರುಃ ಶ್ರೀ ಶರಣಪ್ಪ ಅಂಡರಗಾಲ

ತಂದೆಃಗಂಡನ ಹೆಸರುಃ ಶ್ರೀ ಕೆಂಚಪ್ಪ

ವಯಸ್ಸುಃ 30 ವರ್ಷ

ಉದ್ಯೋಗಃ ಪಿಎಸ್ಐ, ಹಾವೇರಿ ಗ್ರಾಮೀಣ ಪೊಲೀಸ್ ಠಾಣೆ

ವಾಸ ಸ್ಥಳಃ ಹಾವೇರಿ

**ದಿನಾಂಕ: 31.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ನಾನು ಈ ಹಿಂದೆ ದಿನಾಂಕಃ05.08.2024 ರಿಂದ ದಿನಾಂಕಃ24.06.2026 ರವರೆಗೆ ಆಡೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ22.12.2024 ರಂದು ಸಂಜೆ 4.00 ಗಂಟೆ ಸಮಯದಲ್ಲಿ ನಾನು ಆಡೂರು ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಠಾಣಾ ಕರ್ತವ್ಯದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಒಂದು ಲಿಖಿತ ದೂರನ್ನು ನೀಡಿದರು.

2. ಸದರಿ ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಗುನ್ನೆ ಸಂಖ್ಯೆಃ199/2024 ರಡಿಯಲ್ಲಿ ಭಾ.ನ್ಯಾ.ಸಂ.ಕಲಂ.115(2), 118(2), 109, 352 ಮತ್ತು 351(2) ರಡಿಯಲ್ಲಿ ಪ್ರಕರಣವನ್ನು ದಾಖಲುಮಾಡಿಕೊಂಡು ಪ್ರ.ವ.ವರದಿಯನ್ನು ಮೂಲ ದೂರಿನೊಂದಿಗೆ ನ್ಯಾಯಾಲಯಕ್ಕೆ ಸಿಬ್ಬಂದಿ ಮೂಲಕ ರಹವಾನಿಸಿರುತ್ತೇನೆ. ಸದರಿ ಲಿಖಿತ ದೂರನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು.

3. ಅದೇ ದಿನ ಸಂಜೆ 5.00 ಗಂಟೆಗೆ ಪ್ರಕರಣದ ಆರೋಪಿಯು ಕೆರೆಕೆತ್ತನಹಳ್ಳಿಯಲ್ಲಿರುವುದಾಗಿ ಮಾಹಿತಿ ಬಂದಿದ್ದು, ಆಗ ನಾನು ಅಲ್ಲಿಗೆ ಹೋಗಿ ಆರೋಪಿತನನ್ನು ದಸ್ತಗಿರಿ ಮಾಡಿ ಠಾಣೆಗೆ ಕರೆತಂದು ವಿಚಾರಣೆ ಮಾಡಲಾಗಿ ಆತನು ಅಪರಾಧವನ್ನು ಒಪ್ಪಿಕೊಂಡಿದ್ದು, ದಸ್ತಗಿರಿ ನಿಯಮ ಪಾಲಿಸಿ ರಿಮಾಂಡ್ ಯಾದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಸಿಬ್ಬಂದಿಯೊಂದಿಗೆ ಕಳಿಸಿಕೊಟ್ಟಿರುತ್ತೇನೆ. ಸದರಿ ಆರೋಪಿಯನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

4. ದಿನಾಂಕಃ23.12.2024 ರಂದು ಬೆಳಿಗ್ಗೆ 10.30 ರಿಂದ 11.30 ಗಂಟೆಗೆ ಘಟನಾ ಸ್ಥಳವಾದ ಮುಳಥಳ್ಳಿ ಗ್ರಾಮದ ಸರ್ವೇ ನಂ.28/4 ರ ಜಮೀನಿಗೆ ಹೋಗಿ ಚಾಸಾ–2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಪಂಚರಾಗಿ ಸಹಕರಿಸಲು ನೋಟೀಸನ್ನು ಕೊಟ್ಟಿರುತ್ತೇನೆ. ಅದಕ್ಕೆ ಚಾಸಾ–2 ಮತ್ತು 3 ರವರು ಒಪ್ಪಿಕೊಂಡಿರುತ್ತಾರೆ. ಆಗ ನಾನು ಚಾಸಾ–1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಚಾಸಾ–2 ಮತ್ತು 3 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿ, ನಕಾಶೆಯನ್ನು ತಯಾರಿಸಿ, ಫೋಟೋ ತೆಗೆದು, ಸ್ಥಳದಲ್ಲಿದ್ದ ಸಲಿಕೆಯನ್ನು ವಶಪಡಿಸಿಕೊಂಡು ಪಂಚರ ಮತ್ತು ಪಿರ್ಯಾದಿಯ ಸಹಿಗಳನ್ನು ಪಡೆದುಕೊಂಡಿರುತ್ತೇನೆ.

5. ಸದರಿ ಪಂಚನಾಮೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–3 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ–3(ಸಿ) ಎಂದು ಗುರುತಿಸಲಾಯಿತು. ಫೋಟೋವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–4 ಎಂದು ಗುರುತಿಸಲಾಗಿದೆ. ನಕಾಶೆಯನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–5 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ–5(ಸಿ) ಎಂದು ಗುರುತಿಸಲಾಯಿತು. ಪಂಚನಾಮೆಯಡಿ ವಶಪಡಿಸಿಕೊಂಡ ವಸ್ತುವನ್ನು ಪುನಃ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಸಲಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ–1 ಎಂದು ಗುರುತಿಸಲಾಗಿದೆ.

6. ಅದೇ ದಿನ ಚಾಸಾ–1 ರವರ ಮರು ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ಅದೇ ದಿನ ಚಾಸಾ–6 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ನಂತರ ಠಾಣೆಗೆ ವಾಪಾಸ್ಸಾಗಿ ವಶಪಡಿಸಿಕೊಂಡ ವಸ್ತುವನ್ನು ಠಾಣಾ ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

7. ದಿನಾಂಕಃ15.01.2025 ರಂದು ಚಾಸಾ–4 ರವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆನು. ದಿನಾಂಕಃ02.06.2025 ರಂದು ಸಿಬ್ಬಂದಿಯಾದ ಸಿಪಿಸಿ–1224–ಶ್ರೀ ಸುಭಾಷ್ ಚೌಹಾಣ್ ರವರನ್ನು ಕಿಮ್ಸ ಆಸ್ಪತ್ರೆಗೆ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡು ಬರಲು ಕಳಿಸಿಕೊಟ್ಟಿರುತ್ತೇನೆ. ಆದರೆ ಅವರನ್ನು ಸಾಕ್ಷಿ ಪಟ್ಟಿಯಲ್ಲಿ ತೋರಿಸಿಲ್ಲ. ಆಗ ಅದೇ ದಿನ ಸದರಿ ಸಿಬ್ಬಂದಿಯು ಗಾಯಾಳುವಿನ ಫೀಡ್ ಬ್ಯಾಕ್ ಪತ್ರದ ಜೊತೆ ಗಾಯಾಳುವಿಗೆ ಚಿಕಿತ್ಸೆ ನೀಡಿದ ವೈದ್ಯರ ವರದಿಗಳನ್ನು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದರು. ಆಗ ನಾನು ಅವುಗಳನ್ನು ಸ್ವೀಕರಿಸಿ ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ಫೀಡ್ ಬ್ಯಾಕ್ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–7 ಎಂದು ಗುರುತಿಸಿದ್ದು, ನನ್ನ ಸಹಿಯನ್ನು ನಿಪಿ–7(ಎ) ಎಂದು ಗುರುತಿಸಲಾಯಿತು. ವೈದ್ಯರ ವರದಿಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ನಿಪಿ–8 ರಿಂದ 11 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ–8(ಎ) ರಿಂದ 11(ಎ) ಎಂದು ಗುರುತಿಸಲಾಯಿತು.

8. ದಿನಾಂಕಃ08.08.2025 ರಂದು ಠಾಣಾ ಸಿಬ್ಬಂದಿಯಾದ ಸಿಪಿಸಿ–1224–ಶ್ರೀ ಸುಭಾಷ್ ಚೌಹಾಣ್ ರವರನ್ನು ಫೀಡ್ ಬ್ಯಾಕ್ ಪತ್ರದೊಂದಿಗೆ ಹಾವೇರಿ ಜಿಲ್ಲಾ ಆಸ್ಪತ್ರೆಗೆ ಕಳಿಸಿಕೊಟ್ಟು ವೈದ್ಯಾಧಿಕಾರಿಗಳಿಗೆ ಅದನ್ನು ತೋರಿಸಿ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿಕೊಂಡು ಬರುವಂತೆ ಹೇಳಿ ಕಳಿಸಿಕೊಟ್ಟೆನು. ಆಗ ಅದೇ ದಿನ ಸದರಿ ಠಾಣಾ ಸಿಬ್ಬಂದಿಯು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಫೀಡ್ ಬ್ಯಾಕ್ ಪತ್ರವನ್ನು ವೈದ್ಯಾಧಿಕಾರಿಗಳಿಗೆ ತೋರಿಸಿ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಪಡೆದು ನನ್ನ ಮುಂದೆ ಹಾಜರುಪಡಿಸಿದ್ದು, ಅದನ್ನು ನಾನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡೆನು. ಸದರಿ ಗಾಯದ

ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು.

9. ಗಾಯದ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿ ಗಾಯಾಳುವಿಗೆ ಘಟನಾ ಕಾಲಕ್ಕೆ ತೀವ್ರ ಸ್ವರೂಪದ ಗಾಯಾವಾಗಿರುವುದು ಕಂಡು ಬಂತು. ಆಗ ನಾನು ಠಾಣಾ ಸಿಬ್ಬಂದಿಯಾದ ಸಿಪಿಸಿ-926-ಶ್ರೀ ಕರಬಸಪ್ಪ ಗೊಂದಿ ರವರ ಮೂಲಕ ವಶಪಡಿಸಿಕೊಂಡ ಸಲಿಕೆಯನ್ನು ವೈದ್ಯಾಧಿಕಾರಿಗಳಿಗೆ ಕಳಿಸಿಕೊಟ್ಟು ಅವರಿಂದ ಅಭಿಪ್ರಾಯ ಪಡೆದುಕೊಂಡು ಬರುವಂತೆ ಕಳಿಸಿಕೊಟ್ಟೆನು. ಆಗ ಅದೇ ದಿನ ಸದರಿ ಸಿಬ್ಬಂದಿಯು ಮು.ಮಾ-1 ರ ಸಲಾಕೆಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ವೈದ್ಯಾಧಿಕಾರಿಗಳಿಗೆ ತೋರಿಸಿ ಅವರಿಂದ ಅಭಿಪ್ರಾಯ ಪತ್ರವನ್ನು ಪಡೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿದ್ದು, ಅದನ್ನು ನಾನು ಸ್ವೀಕರಿಸಿ ಪರಿಶೀಲಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಅಭಿಪ್ರಾಯ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ- 12 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ- 12(ಬಿ) ಎಂದು ಗುರುತಿಸಲಾಯಿತು.

10. ದಿನಾಂಕಃ12.09.2025 ರಂದು ತನಿಖಾ ಕಾಲಕ್ಕೆ ಸಾಕ್ಷ್ಯಾಧಾರಗಳಿಂದ ಆರೋಪಿಯ ಮೇಲೆ ಮಾಡಲಾದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಯ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಡಿ.ಟಿ.ಬಿ ವಕೀಲರಿಂದಃ**

11. ಪಿರ್ಯಾದಿಯು ದೂರನ್ನು ಕೊಡಲು ಅವರೊಬ್ಬರೇ ಬಂದಿದ್ದರು. ಅವರ ಜೊತೆ ಯಾರೂ ಸಹ ಬಂದಿರಲಿಲ್ಲ. ಪಿರ್ಯಾದಿಯು ಲಿಖಿತ ದೂರನ್ನು ತಂದು ನೀಡಿದರು. ಆಗ ನಾನು ಸದರಿ ದೂರನ್ನು ಪೂರ್ತಿ ಓದಿರುತ್ತೇನೆ. ಈಗ ನನಗೆ ನಿಪಿ-1ರ ದೂರನ್ನು ತೋರಿಸುತ್ತಿದ್ದು, ಅದರಲ್ಲಿ ಆರೋಪಿಯು ಗಾಯಾಳುವಿಗೆ ಸಲಿಕೆಯಿಂದ ತಲೆಗೆ ಹೊಡೆದು ಗಾಯಪಡಿಸಿದನು ಎಂದು ನಮೂದು ಮಾಡಲಾಗಿದೆ ಎಂದರೆ ನಿಜ. ನಿಪಿ-1ರ ಆಧಾರದ ಮೇಲೆ ನಾನು ನಿಪಿ-2 ರ ಪ್ರ.ವ.ವರದಿಯನ್ನು ನೋಂದಣಿ ಮಾಡಿರುತ್ತೇನೆ ಎಂದರೆ ನಿಜ.

12. ಈಗ ನನಗೆ ನಿಪಿ-2ರ ಪ್ರ.ವ.ವರದಿ ನೋಡುತ್ತಿದ್ದು, ಅದರಲ್ಲಿ 2 ನೇ ಪುಟದ ಕಾಲಂ. ನಂ.7 ರಲ್ಲಿ ನೊಂದವರ ಹೆಸರನ್ನು ಬಸನಗೌಡ ವೀರನಗೌಡ ಪಾಟೀಲ್ ಎಂದು

ಬರೆಯಲಾಗಿದೆ ಎಂದರೆ ನಿಜ. ಕಾಲಂ.ನಂ.8 ರಲ್ಲಿ ಸ್ವತ್ತಿನ ವಿವರವನ್ನು ಏನೂ ಸಹ ಬರೆಯದೆ ಖಾಲಿ ಬಿಡಲಾಗಿದೆ ಎಂದರೆ ನಿಜ. ಪಿರ್ಯಾದಿಯಲ್ಲಿ ಹೇಳಿರುವಂತೆ ಕೃತ್ಯಕ್ಕೆ ಉಪಯೋಗಿಸಿರುವ ಸಲಾಕೆಯನ್ನು ಕಾಲಂ.8 ರಲ್ಲಿ ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

13. ಪಿರ್ಯಾದಿಯು ಠಾಣೆಗೆ ಬಂದಾಗ ಸಂಜೆ 4.00 ಗಂಟೆಯಾಗಿತ್ತು. ಪಿರ್ಯಾದಿಯು ದೂರನ್ನು ಕೊಡುವ ಕಾಲಕ್ಕೆ ಆರೋಪಿಯ ಫೋಟೋವನ್ನು ತೋರಿಸಿ ಮತ್ತು ಆತನ ಚಹರೆ  ಹೇಳಿದ್ದರು. ಆಗ ನಾನು ಮತ್ತು ನನ್ನ ಠಾಣಾ ಸಿಬ್ಬಂದಿಗಳು ಆರೋಪಿಯನ್ನು ಪತ್ತೆ ಹಚ್ಚಲು ಹೋಗಿದ್ದೆವು. ಆಗ ನಾವು ಪೊಲೀಸ್ ಸಮವಸ್ತ್ರದಲ್ಲಿದ್ದೆವು. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯ ಮೇಲೆ ಪೊಲೀಸ್ ಠಾಣೆಯಲ್ಲಿ ಗುನ್ನೆ ದಾಖಲಾದಾಗ ಸದರಿ ವ್ಯಕ್ತಿಯ ಮನಸ್ಸಿನಲ್ಲಿ ಪೊಲೀಸರು ಬಂದು ನಮ್ಮನ್ನು ಹಿಡಿಯಬಹುದು ಎಂಬ ಭಯ ಇರುತ್ತದೆ ಎಂದರೆ ನಿಜ. ಆರೋಪಿಯು ಕೆರೆಕತ್ತಿನಹಳ್ಳಿಯ ತನ್ನ ಹೆಂಡತಿ ಮನೆಯಲ್ಲಿದ್ದನು. ಆರೋಪಿಯು ನಮ್ಮನ್ನು ನೋಡಿದ ಕೂಡಲೇ ನಮ್ಮಿಂದ ತಪ್ಪಿಸಿಕೊಂಡು ಓಡಿ ಹೋಗಲು ಪ್ರಯತ್ನಪಡಲಿಲ್ಲ.

14. ಪಿರ್ಯಾದಿಯು ಆರೋಪಿಯ ಬಗ್ಗೆ ಮಾಹಿತಿ ಕೊಟ್ಟ ವಿಷಯವನ್ನು ಮತ್ತು ನಾವು ಕೆರೆಕೆತ್ತಿನಹಳ್ಳಿಗೆ ಹೋಗಿ ಆರೋಪಿಯನ್ನು ಪತ್ತೆ ಹಚ್ಚಿ ಹಿಡಿದುಕೊಂಡ ವಿಷಯವನ್ನು ನಾನು ಎಲ್ಲೂ ಸಹ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಆದರೆ ರಿಮಾಂಡ್ ಯಾದಿಯಲ್ಲಿ ನಮೂದಿಸಿರುತ್ತೇನೆ.

15. ಹಾವೇರಿ ಜಿಲ್ಲಾ ಆಸ್ಪತ್ರೆಯಿಂದ ನಮಗೆ ಗಾಯಾಳು ಚಿಕಿತ್ಸೆಗೆ ದಾಖಲಾದ ಬಗ್ಗೆ ಮಾಹಿತಿ ಬಂದಿತ್ತು. ಪಿರ್ಯಾದಿಯು ದೂರನ್ನು ನೀಡುವ ಮೊದಲು ಯಾವುದೇ ಸಾಕ್ಷಿದಾರರು ನನಗೆ ಘಟನೆಯಲ್ಲಿ ಗಾಯಾಳು ಗಾಯಗೊಂಡು ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿದೆ ಎಂದು ಮಾಹಿತಿ ನೀಡಿರುವುದಿಲ್ಲ. ಚಾಸಾ-5 ಶಂಕರಗೌಡ ಪಾಟೀಲ್ ಇವರು ತಾವರಗೊಪ್ಪ ಗ್ರಾಮದವರು ಎಂದರೆ ನಿಜ. ಆದರೆ ಅವರು ಮುಳಥಳ್ಳಿ ಗ್ರಾಮದ ನಿವಾಸಿ ಅಲ್ಲ ಎಂದರೆ ನಿಜ.

16. ಈಗ ನನಗೆ ನಿಪಿ–1ರ ದೂರಿನ 2 ನೇ ಪುಟವನ್ನು ತೋರಿಸುತ್ತಿದ್ದು, ಅದರಲ್ಲಿ ನಾನು ನನ್ನ ಗಂಡನನ್ನು ಚಿಕಿತ್ಸೆಗೆ ಒಂದು ಕಾರಿನಲ್ಲಿ ಕರೆದುಕೊಂಡು ಹಾವೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ದಾಖಲಿಸಿದೆವು ಎಂದು ನಮೂದಾಗಿದ್ದು, ನಾನು ಅದು ಯಾವ ಕಾರು ಮತ್ತು ಅದರ ಮಾಲೀಕರು ಯಾರೆಂದು ತನಿಖೆ ಮಾಡಿರುವುದಿಲ್ಲ. ಕಾರಣ ಪಿರ್ಯಾದಿಯು ಅದರ ಮಾಹಿತಿ ನೀಡಲಿಲ್ಲ. ನಾನು ಪಿರ್ಯಾದಿಯ ಮರು ಹೇಳಿಕೆಯನ್ನು ದಿನಾಂಕಃ23.12.2024 ರಂದು ಪಡೆದುಕೊಂಡಿರುತ್ತೇನೆ. ಪಿರ್ಯಾದಿಯು ತನ್ನ ಮರು ಹೇಳಿಕೆಯಲ್ಲಿ ತನ್ನ ಗಂಡನನ್ನು ಒಂದು ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದೇನೆ ಎಂದು ಹೇಳಿದ್ದು, ಸದರಿ ಖಾಸಗಿ ವಾಹನ ಯಾವುದು ಮತ್ತು ಅದರ ಮಾಲೀಕರು ಯಾರೆಂದು ನಾನು ತನಿಖೆ ಮಾಡಿಲ್ಲ.

17. ಪಿರ್ಯಾದಿಯು ತನ್ನ ಮರು ಹೇಳಿಕೆಯಲ್ಲಿ ರಕ್ತ ಹತ್ತಿದ ಬಟ್ಟೆಗಳನ್ನು ದಾರಿಯಲ್ಲಿ ಹೋಗುವಾಗ ಎಸೆದಿರುತ್ತೇನೆಂದು ಹೇಳಿದ್ದು, ಅದರ ಬಗ್ಗೆ ನಾನು ಪಿರ್ಯಾದಿಯನ್ನು ಸದರಿ ಜಾಗಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ರಕ್ತ ಹತ್ತಿದ ಬಟ್ಟೆಗಳ ಬಗ್ಗೆ ತನಿಖೆ ಮಾಡಿಲ್ಲ ಮತ್ತು ಅವುಗಳನ್ನು ವಶಪಡಿಸಿಕೊಂಡಿಲ್ಲ. ನಾನು ಪಿರ್ಯಾದಿಯ ಮರು ಹೇಳಿಕೆಯನ್ನು ಸ್ಥಳಕ್ಕೆ ಹೋದಾಗ ಅಲ್ಲಿಯೇ ಪಡೆದುಕೊಂಡಿರುತ್ತೇನೆ.

18. ನಾನು ಪಂಚರನ್ನು ಮುಳಥಳ್ಳಿ ಗ್ರಾಮದಲ್ಲಿಯೇ ಕರೆದುಕೊಂಡು ನಂತರ ಸ್ಥಳಕ್ಕೆ ಹೋದೆನು. ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿ ಪಿರ್ಯಾದಿ ಇದ್ದರು. ಆಗ ನಾನು ಸ್ಥಳದಲ್ಲಿ ಪರಿಶೀಲನೆ ಮಾಡಿರುತ್ತೇನೆ. ನಾನು ಸ್ಥಳ ಪಂಚನಾಮೆಗಾಗಿ ಹೋದಾಗ ಅಲ್ಲಿ ರಕ್ತ ಹತ್ತಿದ ಗುರುತುಗಳು ಇರಲಿಲ್ಲ. ಈಗ ನನಗೆ ನಿಪಿ–3ರ ಸ್ಥಳ ಪಂಚನಾಮೆ ತೋರಿಸುತ್ತಿದ್ದು, ಅದು ಗಣಕೀಕರಣಗೊಳಿಸಲಾಗಿದೆ ಎಂದರೆ ನಿಜ. ಪೋರ್ಟಬಲ್ ಪ್ರಿಂಟರ್ ಗೆ ವಿದ್ಯುತ್ ಚಕ್ತಿ ಸಂಪರ್ಕ ವೈರ್, ಸ್ವಿಚ್ ಬೋರ್ಡ ಮುಂತಾದ ಸಲಕರಣೆ ಬೇಕಾಗುತ್ತದೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ನಮ್ಮ ಜೀಪಿನ ಬ್ಯಾಟರಿ ಸಹಾಯದಿಂದ ವಿದ್ಯುತ್ ಚಕ್ತಿ ಒದಗಿಸಿ ಪ್ರಿಂಟ್ ತೆಗೆದಿರುತ್ತೇನೆಂದು ನುಡಿದಿರುತ್ತಾರೆ.

19. ನಿಪಿ–4 ರ ಫೋಟೋವನ್ನು ಠಾಣಾ ಸಿಬ್ಬಂದಿಯಾದ ಚಾಸಾ–10 ರವರು ಠಾಣೆಗೆ ಒದಗಿಸಿದ್ದ ಸಾಮಾನ್ಯ ಕ್ಯಾಮೆರಾದಿಂದ ತೆಗೆದಿರುತ್ತಾರೆ. ಘಟನಾ ಸ್ಥಳಕ್ಕೆ ಪೋರ್ಟಬಲ್ ಪ್ರಿಂಟರ್ ತೆಗೆದುಕೊಂಡು ಹೋದ ಬಗ್ಗೆ ಮತ್ತು ಅದರಿಂದ ಪ್ರಿಂಟ್ ತೆಗೆದ ಬಗ್ಗೆ ನಾನು ಫೋಟೋಗಳನ್ನು ತೆಗೆದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನಿಜ. ನಾವು ಘಟನಾ ಸ್ಥಳಕ್ಕೆ ಪಂಚನಾಮೆಗೆ ಹೋದಾಗ ಅಲ್ಲಿ ಮು,ಮಾ–1 ರ ಸಲಿಕೆ ಬಿದ್ದಿತ್ತು. ಈಗ ನನಗೆ ಮು.ಮಾ–1 ರ ಸಲಿಕೆ ಮೇಲೆ ಅಂಟಿಸಿರುವ ಚೀಟಿ ತೋರಿಸುತ್ತಿದ್ದು, ಅದರಲ್ಲಿ ಪಂಚನಾಮೆಯನ್ನು ಜರುಗಿಸಿದ ಸಮಯವನ್ನು ನಮೂದು ಮಾಡಿಲ್ಲ ಎಂದರೆ ನಿಜ. ಮು.ಮಾ–1 ರ ವಸ್ತುವನ್ನು ನೆಲದ ಮೇಲೆ ಎಸೆದಾಗ ಅದು ನಿಂತ ಸ್ಥಿತಿಯಲ್ಲಿರುವುದಿಲ್ಲ ಎಂದರೆ ಸಾಕ್ಷಿಯು ನಿಂತ ಸ್ಥಿತಿಯಲ್ಲಿರಬಹುದು ಅಥವಾ ಬೀಳ ಬಹುದು ಎಂದು ನುಡಿದಿರುತ್ತಾರೆ. ಮು.ಮಾ–1 ರ ವಸ್ತುವನ್ನು ಅದು ಯಾವ ಸ್ಥಿತಿಯಲ್ಲಿತ್ತೋ ಅದನ್ನು ಜಪ್ತುಪಡಿಸಿಕೊಂಡು ಅದಕ್ಕೆ ಪಂಚರ ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿ ಠಾಣೆಗೆ ತಂದಿರುತ್ತೇನೆ.

20. ಈಗ ನನಗೆ ನಿಪಿ–5 ರ ನಕಾಶೆಯನ್ನು ತೋರಿಸುತ್ತಿದ್ದು, ಅಲ್ಲಿ ಘಟನಾ ಸ್ಥಳದ ಆಜು–ಬಾಜುದಾರರಾಗಿ ಸುಭಾಷ ರಾಮಪ್ಪ ತಳವಾರ ಮತ್ತು ಈರನಗೌಡ ಬಸನಗೌಡ ಪಾಟೀಲ್ ಎಂದು ತೋರಿಸುತ್ತಿದ್ದು, ನಾನು ಅವರನ್ನು ವಿಚಾರಣೆ ಮಾಡಿಲ್ಲ ಮತ್ತು ಅವರ ಹೇಳಿಕೆಯನ್ನು ತೆಗೆದುಕೊಂಡಿಲ್ಲ. ಪ್ರತ್ಯಕ್ಷದರ್ಶಿಗಳು ಎಂದು ದೋಷಾರೋಪಣಾ ಪಟ್ಟಿಯಲ್ಲಿ ತೋರಿಸಲಾದ ಚಾಸಾ–5 ರಿಂದ 8 ರವರ ಜಮೀನುಗಳು ಅಥವಾ ಮನೆಗಳು ಘಟನಾ ಸ್ಥಳದ ಅಕ್ಕ–ಪಕ್ಕ ಅಥವಾ ಹಿಂದೆ ಮುಂದೆ ಇದ್ದ ಬಗ್ಗೆ ನಾನು ವಿಚಾರಣೆ ಮಾಡಿಲ್ಲ ಮತ್ತು ತನಿಖೆ ಕೈಗೊಂಡಿಲ್ಲ.

21. ಚಾಸಾ–5 ಶಂಕರಗೌಡ ಪಾಟೀಲ್ ಪಿರ್ಯಾದಿಯ ತಂದೆ ಎಂದರೆ ನನಗೆ ಗೊತ್ತಿಲ್ಲ. ಚಾಸಾ–5 ರಿಂದ 8 ಇವರು ಪಿರ್ಯಾದಿಗೆ ಬೇಕಾದಂತಹ ಸಾಕ್ಷಿದಾರರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ–6 ಸುರೇಶಗೌಡ ಬಸನಗೌಡ ಪಾಟೀಲ್ ಆರೋಪಿ ಮತ್ತು ಗಾಯಾಳುವಿನ ತಂದೆಯ ತಮ್ಮನ ಮಗ ಎಂದರೆ ಅದು ನನಗೆ ಗೊತ್ತಿಲ್ಲ. ಸ್ಥಳ

ಪಂಚರನ್ನು ಸ್ಥಳದಲ್ಲಿ ನಿಲ್ಲಿಸಿ ಫೋಟೊ ತೆಗೆದುಕೊಂಡು ನಂತರ ಅವರನ್ನು ಠಾಣೆಗೆ ಕರೆಸಿ ಅಲ್ಲಿಯೋ ಸ್ಥಳ ಪಂಚನಾಮೆ ಮತ್ತು ನಕಾಶೆಯನ್ನು ಬನಾವಟ್ ಮಾಡಿ ಸಹಿಗಳನ್ನು ಪಡೆದುಕೊಂಡಿದ್ದೇನೆ ಎಂರೆ ಸರಿಯಲ್ಲ. ಪಿರ್ಯಾದಿಯು ಮು.ಮಾ–1 ರ ಸಲಿಕೆಯನ್ನು ಹೊಲದಲ್ಲಿ ಇದ್ದದ್ದನ್ನು ತಂದು ಇದರಲ್ಲಿಯೇ ಆರೋಪಿ ನನಗೆ ಹೊಡೆದಿರುತ್ತಾನೆಂದು ತೋರಿಸಿದ್ದು, ಆಗ ನಾನು ಅದನ್ನು ಜಪ್ತು ಪಡಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

22. ಚಾಸಾ–5 ರಿಂದ 8 ರವರು ಆ ದಿನ ಘಟನಾ ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ–9 ಮತ್ತು 10 ರವರು ನನ್ನ ಮುಂದೆ ಯಾವುದೇ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಯಾವುದೇ ಪ್ರತ್ಯಕ್ಷದರ್ಶಿಗಳು ಇಲ್ಲದೇ ಇದ್ದರೂ ಸಹ ಪಿರ್ಯಾದಿ ಕೊಟ್ಟ ಸುಳ್ಳು ಮಾಹಿತಿ ಮೇರೆಗೆ ಅವರನ್ನು ಸಾಕ್ಷಿ ಪಟ್ಟಿಯಲ್ಲಿ ಸೇರಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

23. ಚಾಸಾ–4 ರವರ ಹೇಳಿಕೆಯನ್ನು ನಾನು ನಮ್ಮ ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ. ಈಗ ನನಗೆ ನಿಪಿ–7 ರ ಫೀಡ್ ಬ್ಯಾಕ್ ಪತ್ರವನ್ನು ತೋರಿಸುತ್ತಿದ್ದು, ಅದರಲ್ಲಿ date of admission 20.12.2024 and date of discharge 04.01.2025 ಎಂದು ನಮೂದು ಮಾಡಲಾಗಿದೆ ಎಂದರೆ ನಿಜ. ನಾನು ಸದರಿ ಅವಧಿಯಲ್ಲಿ ಕಿಮ್ಸ ಆಸ್ಪತ್ರೆಗೆ ಹೋಗಿ ಚಾಸಾ–4 ರವರ ಹೇಳಿಕೆ ಪಡೆದುಕೊಂಡು ಬರಲು ನನಗೆ ಯಾವುದೇ ತೊಂದರೆ ಇರಲಿಲ್ಲ.

24. ಗಾಯಾಳುವಿಗೆ ಹುಬ್ಬಳ್ಳಿ ಕಿಮ್ಸ ಆಸ್ಪತ್ರೆಯಲ್ಲಿ ನಿಪಿ–7 ಮತ್ತು 8 ರ ದಾಖಲಾತಿಗಳ ಪ್ರಕಾರ ಸಿಟಿ ಸ್ಕ್ಯಾನ್ ಮತ್ತು ಎಕ್ಸ ರೇ, abdomen ultra sound scan ಇವುಗಳನ್ನು ಮಾಡಲಾಗಿದೆ ಎಂದರೆ ನಿಜ. ಕಿಮ್ಸ ಆಸ್ಪತ್ರೆಗೆ ನಾನು ಯಾವುದೇ ಪ್ರತ್ಯೇಕ ಮನವಿ ಸಲ್ಲಿಸಿಲ್ಲ ಮತ್ತು ಸಿಟಿ ಸ್ಕ್ಯಾನ್ ಮತ್ತು ಎಕ್ಸ ರೇ, abdomen ultra sound scan ಇವುಗಳನ್ನು ಕೊಡಿ ಎಂದು ವಿನಂತಿಸಿಕೊಂಡಿಲ್ಲ.

25. ನಾನು ದಿನಾಂಕಃ12.09.2025 ರಂದು ಬೆಳಿಗ್ಗೆ ಹಾವೇರಿ ಜಿಲ್ಲಾ ಆಸ್ಪತ್ರೆ ವೈದ್ಯರಿಗೆ ಅಭಿಪ್ರಾಯ ಕೋರಿ ಮನವಿ ಪತ್ರ ಸಲ್ಲಿಸಿರುತ್ತೇನೆ. ಆಗ ಅದೇ ದಿನ ಮದ್ಯಾಹ್ನ ಹಾವೇರಿ ಜಿಲ್ಲಾ

ಆಸ್ಪತ್ರೆ ವೈದ್ಯಾಧಿಕಾರಿಗಳು ನಿಪಿ–12 ರಂತೆ ಅಭಿಪ್ರಾಯ ಪತ್ರವನ್ನು ಕೊಟ್ಟಿರುತ್ತಾರೆ. ಆಗ ನಾನು ಅದನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಈಗ ನನಗೆ ನಿಪಿ–12 ರ ದಾಖಲಾತಿಯ್ನನು ತೋರಿಸುತ್ತಿದ್ದು, ಅದರಲ್ಲಿ ಹಾಕಿರುವ ಮುದ್ದೆ ಮಾಲಿನ diagram ನ್ನು ವೈದ್ಯರೇ ಬರೆದಿರುತ್ತಾರೆ. ಈಗ ನನಗೆ ನಿಪಿ–12 ರ ದಾಖಲಾತಿಯನ್ನು ತೋರಿಸುತ್ತಿದ್ದು, ಅದರ ಮೊದಲನೇ ಪುಟದಲ್ಲಿ ನಮೂದು ಇರುವ ಗಾಯಗಳು ಸದರಿ ಬಡಿಗೆಯಿಂದ ಹೊಡೆದಲ್ಲಿ ಆಗುವ ಸಾಧ್ಯತೆ ಇರುವುದೋ ಹೇಗೆ? ಅನ್ನುವ ಬಗ್ಗೆ ತಮ್ಮ ಸ್ಪಷ್ಟ ಅಭಿಪ್ರಾಯ ನೀಡಲು ಕೋರಿರುತ್ತೀರಿ ಎಂದು ನಮೂದಿಸಲಾಗಿದೆ ಎಂದರೆ ನಿಜ. ನಿಪಿ–12 ರ ಕೊನೆ ಪುಟದಲ್ಲಿ ಮೇಲಿನಂತೆ ಒಂದು ಸಲಿಕೆಯನ್ನು ಪರಿಶೀಲಿಸಿದಾಗ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಇರುವ ಗಾಯಗಳು ಸದರಿ ಬಡಿಗೆಯಿಂದ ಹೊಡೆದಲ್ಲಿ ಆಗಬಹುದು ಎಂದು ನಮೂದು ಮಾಡಲಾಗಿದೆ ಎಂದರೆ ನಿಜ.

26. ನಾನು ಪ್ರಕರಣದಲ್ಲಿ ಪ್ರತ್ಯಕ್ಷವಾಗಿ ಯಾವುದೇ ತನಿಖೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖಾ ಅವಧಿಯಲ್ಲಿ ಘಟನೆಯ ದಿನ ಮುಳಥಳ್ಳಿ ಗ್ರಾಮದಲ್ಲಿ ನಾಗಪ್ಪ ಅಮರದ ಎಂಬ ವ್ಯಕ್ತಿ ತೀರಿಕೊಂಡ ವಿಚಾರ ಕಂಡು ಬಂತು ಎಂದರೆ ಸಾಕ್ಷಿಯು ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಆ ದಿನ ಸಂಜೆ 4.00–5.00 ಗಂಟೆ ಸಮಯದಲ್ಲಿ ಸದರಿ ತೀರಿಕೊಂಡ ವ್ಯಕ್ತಿಯ ಶವ ಸಂಸ್ಕಾರ ಆಗಿದ್ದು, ಅಲ್ಲಿ ಆರೋಪಿ ಮತ್ತು ಸಾಕ್ಷಿದಾರರು ಹಾಗೂ ಗಾಯಾಳು ಭಾಗವಹಿಸಿದ್ದರು ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾವುದೇ ಘಟನೆಯಾಗದೇ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

27. ಈಗ ನನಗೆ ನಿಪಿ–6 ರ ಗಾಯದ ಪ್ರಮಾಣ ಪತ್ರ ತೋರಿಸುತ್ತಿದ್ದು, age of injury ಬಗ್ಗೆ ನಮೂದು ಮಾಡಿಲ್ಲ ಎಂದರೆ ನಿಜ. ಚಾಸಾ–4 ರವರು ಈ ಹಿಂದೆ ಮೋಟಾರ್ ಸೈಕಲ್ ಮೇಲೆ ಬಿದ್ದು ಗಾಯಪಡಿಸಿಕೊಂಡಿದ್ದು, ಅದರ ಬಗ್ಗೆ ನಾನು ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಘಟನೆಯಲ್ಲಿ ಗಾಯಾಳುವಿಗೆ ಯಾವುದೇ ಗಾಯ ಆಗದೇ ಇದ್ದ ಕಾರಣ ಬಹಳ ವಿಳಂಬ ಮಾಡಿ ಗಾಯಾಳುವಿನ ಹೇಳಿಕೆ ಪಡೆದುಕೊಂಡೆ ಎಂದರೆ ಸರಿಯಲ್ಲ. ನಿಪಿ–6 ರ

ದಾಖಲಾತಿಯಲ್ಲಿ ಎಲ್ಲೂ ಸಹ MLC ಕೇಸು ಎಂದು ನಮೂದು ಮಾಡಿಲ್ಲ ಎಂದರೆ ನಿಜ.

28. ನಮ್ಮ ಆಡೂರು ಪೊಲೀಸ್ ಠಾಣೆಗೂ ಕೆರೆಕ್ಯಾತನಹಳ್ಳಿಗೂ 15 ಕಿ.ಮೀ ಅಂತರ ಇದೆ. ಕೆರೆಕ್ಯಾನಹಳ್ಳಿಯಿಂದ ಆಡೂರು ಪೊಲೀಸ್ ಠಾಣೆಗೆ ವಾಹನದಲ್ಲಿ ಹೋದಲ್ಲಿ 15-20 ನಿಮಿಷ ಸಮಯ ಬೇಕಾಗುತ್ತದೆ. ಆರೋಪಿಯ ಹೆಂಡತಿಯ ಮನೆಗೆ ನಾನು ಹೋಗಿಲ್ಲ ಮತ್ತು ಅಲ್ಲಿ ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಮತ್ತು ಆತನು ಅಪರಾಧವನ್ನು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಆಗಿರುವ ಗಾಯಕ್ಕೂ ಮತ್ತು ಮು.ಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ನನ್ನ ಮುಂದೆ ಯಾವುದೇ ಹೇಳಿಕೆ ಕೊಡದೇ ಇದ್ದರೂ ಸಹ ಅವುಗಳನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು, ಹಾವೇರಿ